# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಮಾನ್ಯ ಸದಸ್ಯರ ಹೆಸರು | : | ಶ್ರೀ ಸಿ.ಎನ್ ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 2 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 717 |
| 3 | ಉತ್ತರಿಸಬೇಕಾದ ದಿನಾಂಕ | : | 21.08.2026 |
| 4 | ಉತ್ತರಿಸುವ ಸಚಿವರು | : | ಕಾರ್ಮಿಕ ಹಾಗೂ ಉದ್ಯೋಗ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಅಧೀನದಲ್ಲಿರುವ ಸುಮಾರು 126 ಇಎಸ್ಐ (ESI) ಚಿಕಿತ್ಸಾಲಯಗಳಲ್ಲಿ ಸೂಕ್ತ ಚಿಕಿತ್ಸೆ ಸಿಗದೆ ಸಂಘಟಿತ ವಲಯದ ಕಾರ್ಮಿಕರ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಚಿಕಿತ್ಸಾಲಯಗಳಲ್ಲಿ ಎದುರಾಗಿರುವ ಸಮಸ್ಯೆಗಳೇನು; (ವಿವರ ನೀಡುವುದು) | ಬಂದಿದೆ.<br><br>ರಾಜ್ಯದ ಅಧೀನದಲ್ಲಿ 125 ಕಾರಾವಿ ಚಿಕಿತ್ಸಾಲಯಗಳು ಕಾರ್ಯ ನಿರ್ವಹಿಸುತ್ತಿದ್ದು, ಎಲ್ಲಾ ಕಾರಾವಿ ಚಿಕಿತ್ಸಾಲಯಗಳಲ್ಲಿ ಸ್ವಲ್ಪ ಮಟ್ಟದ ಸಿಬ್ಬಂದಿ ಕೊರತೆಯಿದ್ದು, ಇಲಾಖೆಯಿಂದ ತಾತ್ಕಾಲಿಕವಾಗಿ 40 MBBS ಹಾಗೂ 35 ತಜ್ಞ ವೈದ್ಯರುಗಳನ್ನು ಗುತ್ತಿಗೆ ಆಧಾರದ ಮೇಲೆ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ 48 ಅರೆ ವೈದ್ಯಕೀಯ ಸಿಬ್ಬಂದಿಗಳು, 145 ಶುಶ್ರೂಷಕರು, 196 ಫಾರ್ಮಸಿಸ್ಟ್‌ಗಳನ್ನು ರಾಜ್ಯದ್ಯಾಂತ ಅವಶ್ಯಕವಿರುವ ಆಸ್ಪತ್ರೆ ಹಾಗೂ ಚಿಕಿತ್ಸಾಲಯಗಳಿಗೆ ನೇಮಕ ಮಾಡಲಾಗಿದೆ.<br><br>ಮುಂದುವರೆದು, ಇಲಾಖೆಯಲ್ಲಿನ ಆಸ್ಪತ್ರೆ/ಚಿಕಿತ್ಸಾಲಯಗಳಿಗೆ ಅವಶ್ಯಕತೆಯಿರುವ ವೈದ್ಯಕೀಯ ಉಪಕರಣಗಳನ್ನು ಹಾಗೂ ಅವಶ್ಯಕವಾಗಿರುವ ಔಷಧಿಗಳನ್ನು ಖರೀದಿಸಿ ಎದುರಾಗಿರುವ ಸವಸ್ಯೆಗಳನ್ನು ಸಮರ್ಪಕವಾಗಿ ನಿವಾರಿಸಲಾಗಿದೆ. |
| ಆ) | ಕಾರ್ಮಿಕರಿಂದ ಪ್ರತಿ ತಿಂಗಳು ಚಂದಾದಾರಿಕೆ ಹಣ ಕಡಿತಗೊಳಿಸುತ್ತಿದ್ದರೂ, ಕಲಬುರಗಿ ಸೇರಿದಂತೆ ವಿವಿಧ ಇಎಸ್ಐ ಚಿಕಿತ್ಸಾಲಯ ಗಳಲ್ಲಿ ಕನಿಷ್ಠ ಸಾಮಾನ್ಯ ಔಷಧಿಗಳು ಲಭ್ಯವಿಲ್ಲದೆ ಖಾಸಗಿ ಮೆಡಿಕಲ್ ಶಾಫ್ ಗಳಲ್ಲಿ ಖರೀದಿಸುವಂತಾಗಿರುವುದು ನಿಜವೇ; ಈ ಔಷಧಿಗಳ ಅಭಾವಕ್ಕೆ ಕಾರಣಗಳೇನು; | ರಾಜ್ಯದಲ್ಲಿನ ಕಾರಾವಿ ಆಸ್ಪತ್ರೆಗಳು ಹಾಗೂ ಚಿಕಿತ್ಸಾಲಯಗಳ ಬೇಡಿಕೆಗೆ ಅನುಗುಣವಾಗಿ ಕಾಲಕಾಲಕ್ಕೆ ಅವಶ್ಯಕವಾಗಿರುವ ಔಷಧಿಗಳನ್ನು ಖರೀದಿ ಮಾಡಿ ವಿತರಿಸಲಾಗುತ್ತಿದೆ. ಆದರೂ ಕೆಲವು ಸಂದರ್ಭಗಳಲ್ಲಿ ಟೈ-ಆಪ್ ಆಸ್ಪತ್ರೆಗಳು ಸಲಹಾ ಚೀಟಿಗಳನ್ನು ನೀಡುವಾಗ Non-RC ಔಷಧಿಗಳನ್ನು ಸೂಚಿಸಿದಾಗ ಅಂತಹ ಔಷಧಿಗಳು ಲಭ್ಯವಿಲ್ಲದ ಪಕ್ಷದಲ್ಲಿ ಅಂತಹ ಔಷಧಿಗಳಿಗೆ ಮರು ಪಾವತಿಯನ್ನು ಮಾಡಲಾಗಿರುತ್ತದೆ. |

| | | |
|---|---|---|
| ಇ) | ಇಎಸ್ ಐ ಮೆಡಿಕಲ್ ಸರ್ವೀಸಸ್, ಹೆಸರನ್ನು ಇಎಸ್ ಐ ಮೆಡಿಕಲ್ ಸೊಸೈಟಿ ಎಂದು ಬದಲಾಯಿಸದ ನಂತರ ಫಲಾನುಭವಿಗಳ ಚಿಕಿತ್ಸಾ ವೆಚ್ಚದ ಬಿಲ್ ಗಳು (K-2 ಬಿಲ್) ಮಂಜೂರಾಗದೆ ವಿಳಂಬವಾಗುತ್ತಿರಲು ಕಾರಣಗಳೇನು; ಖಾಸಗಿ ಒಪ್ಪಂದದ ಆಸ್ಪತ್ರೆಗಳಿಗೆ (Empaneled Hospitals) ರೋಗಿಗಳನ್ನು ರೆಫರ್ ಮಾಡಲು ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲಾಖೆಯು KESIS ಸೊಸೈಟಿಯಾದಾಗ ಎಲ್ಲಾ ವಹಿವಾಟುಗಳು ಸೊಸೈಟಿಯ accounting system ನಲ್ಲಿ ಕಾರ್ಯ ನಿರ್ವಹಿಸಬೇಕಾಗಿರುತ್ತದೆ.<br><br>1st April 2026 ರಿಂದ ಇಲಾಖೆಯು ಸೊಸೈಟಿಯಾಗಿ ಕಾರ್ಯಾರಂಭ ಮಾಡಲು ಪ್ರಾರಂಭಿಸಿದ್ದು ಇದರನ್ವಯ ಸೊಸೈಟಿ ಮಾರ್ಗಸೂಚಿಗಳ ಆಧಾರದ ಮೇಲೆ ಬ್ಯಾಂಕ್ ಖಾತೆಗಳ ಮೂಲಕ ಫಲಾನುಭವಿಗಳಿಗೆ ಮರುಪಾವತಿ ಮಾಡಲು ಕ್ರಮ ವಹಿಸಲಾಗಿರುತ್ತದೆ. ಈ ಕಾರಣದಿಂದಾಗಿ ಕೆ-2 ಮೂಲಕ ಯಾವುದೇ ಚಿಕಿತ್ಸಾ ವೆಚ್ಚದ ಬಿಲ್ಲುಗಳನ್ನು ಮರುಪಾವತಿ ಮಾಡಲು ಸಾಧ್ಯವಿರುವುದಿಲ್ಲ.<br><br>ರಾಜ್ಯದ ಎಲ್ಲಾ ಕಾರಾವಿ ಆಸ್ಪತ್ರೆಗಳಲ್ಲಿ ಲಭ್ಯವಿಲ್ಲದ ಚಿಕಿತ್ಸೆಗಳಿಗೆ ಹೊಂದಾಣಿಕೆ ಖಾಸಗಿ ಆಸ್ಪತ್ರೆಗಳಿಗೆ ಅವಶ್ಯವಿರುವ ವಿಮಾರೋಗಿಗಳಿಗೆ ನಿರಾಕರಿಸದೆ ತಲಾನುದಾನ ಪತ್ರವನ್ನು ನೀಡಲಾಗಿರುತ್ತದೆ.<br><br>ಕೇಂದ್ರ ಸರ್ಕಾರದ ಕಾರಾವಿ ನಿಗಮದ ದಿನಾಂಕ: 23.06.2026 ರ ಸುತ್ತೋಲೆಯಲ್ಲಿ ಗಂಭೀರ ಖಾಯಿಲೆ ಒಳಗೊಂಡಂತೆ ಎಲ್ಲಾ ಮಾದರಿಯ ಖಾಯಿಲೆಗಳಿಗೆ ತಲಾನುದಾನ ನೀಡಲು ಅವಕಾಶವಿರುತ್ತದೆ. ತಲಾನುದಾನ ಪತ್ರ ನೀಡುವ ಬಗ್ಗೆ ಒಂದು ನಿರ್ದಿಷ್ಟ ಕಾರ್ಯ ಸೂಚಿಯನ್ನು ಹೊರಡಿಸಿದ್ದು ಅದರಂತೆ ಕಾರಾವಿ ಚಿಕಿತ್ಸಾಲಯಗಳು ಹೊಂದಾಣಿಕೆ ಆಸ್ಪತ್ರೆಗಳಿಗೆ ತಲಾನುದಾನ ನೀಡುವ ಮುನ್ನ ಸಂಬಂಧಿಸಿದ ಕಾರಾವಿ ಆಸ್ಪತ್ರೆಗಳಲ್ಲಿ ಸಧ್ಯ ಚಾಲ್ತಿಯಲ್ಲಿರುವ ರೆಫರಲ್ ಸಮಿತಿಯ ಅನುಮೋದನೆ ಮೇರೆಗೆ ನೀಡಲು ಆದೇಶಿಸಲಾಗಿರುತ್ತದೆ.<br><br>ಸದರಿ ವ್ಯವಸ್ಥೆಯಲ್ಲಿ ವಿಮಾದಾರರಿಗೆ / ಕುಟುಂಬಸ್ಥರಿಗೆ ಯಾವುದೇ ತೊಂದರೆಯಾಗದಂತೆ ಮಿಂಚಂಚೆ / ಆನ್ ಲೈನ್ ಮುಖಾಂತರ ಪಡೆಯುವಂತೆ ಸೂಚಿಸಲಾಗಿರುತ್ತದೆ. ಎಲ್ಲಾ ಕಾರಾವಿ ಚಿಕಿತ್ಸಾಲಯ / ಆಸ್ಪತ್ರೆಗಳಿಗೆ ವಿಮಾದಾರರಿಗೆ ಯಾವುದೇ ತೊಂದರೆಯಾಗದಂತೆ ಕ್ರಮವಹಿಸಲು ಸೂಚಿಸಲಾಗಿದೆ. ಯಾವುದೇ ತುರ್ತು / ಗಂಭೀರ ಸಂದರ್ಭಗಳಲ್ಲಿ ರೋಗಿಗಳಿಗೆ ನೇರವಾಗಿ ಹೊಂದಾಣಿಕೆ ಆಸ್ಪತ್ರೆಗಳಲ್ಲಿ ದಾಖಲಾಗಲು ಹೊಂದಾಣಿಕೆ ಆಸ್ಪತ್ರೆಗಳಿಗೆ |

| | | |
|---|---|---|
| | | ಅವಕಾಶವಿದ್ದು, 24 ಗಂಟೆಯ ಒಳಗೆ ಕ್ರಮಬದ್ಧಗೊಳಿಸಬೇಕಾಗುವುದು.<br>ವಿಮಾರೋಗಿಗಳಿಗೆ ಹೊಂದಾಣಿಕೆ ಖಾಸಗಿ ಆಸ್ಪತ್ರೆಗಳಿಗೆ ತಲಾನುದಾನ ನೀಡಿದ್ದಲ್ಲಿ ಚಿಕಿತ್ಸೆಯು CGHS ದರದನ್ವಯ ಪ್ಯಾಕೇಜ್‌ಗೆ ಒಳಪಟ್ಟಿರುತ್ತದೆ. ಹೊಂದಾಣಿಕೆ ಖಾಸಗಿ ಆಸ್ಪತ್ರೆಗಳಲ್ಲಿ ತಲಾನುದಾನ ಮೇರೆಗೆ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಲ್ಲಿ, ಕಾರಾವಿ ಚಿಕಿತ್ಸಾಲಯ / ಆಸ್ಪತ್ರೆಗಳಲ್ಲಿ ಲಭ್ಯವಿಲ್ಲದ ಅಂತಹ ಔಷಧಿಗಳಿಗೆ ಮರುಪಾವತಿಯನ್ನು ನೀಡಲಾಗುತ್ತಿದೆ. |
| ಈ) | ಇಎಸ್‌ಐ ಚಿಕಿತ್ಸಾಲಯಗಳಲ್ಲಿ ಕುಡಿಯುವ ನೀರು, ಶೌಚಾಲಯ ಹಾಗೂ ನೈರ್ಮಲ್ಯದಂತಹ ಕನಿಷ್ಠ ಮೂಲಸೌಕರ್ಯಗಳ ಕೊರತೆಯನ್ನು ಸರಿಪಡಿಸಲು ಮತ್ತು ಜಿಲ್ಲಾ/ ತಾಲ್ಲೂಕು ಮಟ್ಟದ ಚಿಕಿತ್ಸಾಲಯಗಳಿಗೆ ಉನ್ನತಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು? | ಇಲಾಖೆಯಲ್ಲಿ ಒಟ್ಟು 125 ಚಿಕಿತ್ಸಾಲಯಗಳಿದ್ದು, ಇದರಲ್ಲಿ 36 ಸ್ವಂತ ಕಟ್ಟಡಗಳು ಹಾಗೂ 89 ಬಾಡಿಗೆ ಕಟ್ಟಡಗಳಾಗಿರುತ್ತದೆ. ಸ್ವಂತ ಕಟ್ಟಡದ ನಿರ್ವಹಣೆಯು ಕೇಂದ್ರ ಸರ್ಕಾರದ ಇ.ಎಸ್.ಐ.ಸಿ ರವರ ಅಧೀನಕ್ಕೆ ಒಳಪಟ್ಟಿರುತ್ತದೆ. ಬಾಡಿಗೆ ಕಟ್ಟಡಗಳ ಕಟ್ಟಡದ ಮಾಲೀಕರಿಗೆ ನಿರ್ವಹಣೆ ಮಾಡುವಂತೆ ಸೂಚಿಸಲಾಗಿರುತ್ತದೆ. ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು ಹಾಗೂ ಉಪ ವೈದ್ಯಕೀಯ ಅಧೀಕ್ಷಕರ ವ್ಯಾಪ್ತಿಗೆ ಬರುವ ಚಿಕಿತ್ಸಾಲಯಗಳಿಗೆ ಆಗಿಂದಾಗ್ಗೆ ಭೇಟಿ ನೀಡಿ ಕುಡಿಯುವ ನೀರು, ಶೌಚಾಲಯ ಹಾಗೂ ನೈರ್ಮಲ್ಯತೆಯ ಮೂಲ ಸೌಕರ್ಯಗಳ ಬಗ್ಗೆ ಪರಿಶೀಲಿಸಿ ಆಯುಕ್ತಾಲಯಕ್ಕೆ ವರದಿ ನೀಡುವಂತೆ ನಿರ್ದೇಶನ ನೀಡಲಾಗಿರುತ್ತದೆ. |

**ಕಡತ ಸಂಖ್ಯೆ: ಕಾಇ 163 ಎಲ್‌ಸ್‌ಐ 2026.**

**(ಸಂತೋಷ್ ಲಾಡ್)**
ಕಾರ್ಮಿಕ ಹಾಗೂ ಉದ್ಯೋಗ ಸಚಿವರು.